# ಪುಟಾಣಿ ಗೈಡ್!



■ ಪ್ರವೀಣ ಕುಲಕರ್ಣಿ

ನೀವು ಯಾವುದಾದರೂ ಐತಿಹಾಸಿಕ ಪ್ರವಾಸಿ ತಾಣಕ್ಕೆ ಹೋದರೆ ಅಲ್ಲಿ ನಿಮ್ಮನ್ನು ಎದುರುಗೊಳ್ಳುವುದು ಟೂರಿಸ್ಟ್ ಗೈಡ್‌ಗಳಲ್ಲವೇ? ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಸಾರುವ ಹಂಪಿಗೆ ನೀವು ಬಂದಿದ್ದಾದರೆ ಶಾಲೆಯಲ್ಲಿ ಹೆಚ್ಚು ಕಲಿಯದ ಹಳ್ಳಿ ಹೈದರು ಅಸ್ಖಲಿತವಾಗಿ ಇಂಗ್ಲಿಷ್, ಫ್ರೆಂಚ್, ಇಟಲಿ, ಸ್ಪ್ಯಾನಿಷ್ ಭಾಷೆಗಳನ್ನು ಮಾತನಾಡುವುದು ಕಂಡು ನಿಬ್ಬೆರಗಾಗುತ್ತೀರಿ. ಯೂರೋಪಿನ ಹಲವು ಯುವತಿಯರು ಇಂತಹ ಗೈಡ್‌ಗಳಿಗೆ ಮನಸೋತು ಮದುವೆಯಾದದ್ದನ್ನು ಈಗ ಬೇಕಾದರೆ ಹಂಪಿಯ ಆಧುನಿಕ ಚರಿತ್ರೆ ಎಂದೇ ಕರೆಯಬಹುದು. ಗೈಡ್‌ಗಳ ಕುರಿತು ಇಷ್ಟೇಕೆ ಪೀಠಿಕೆ ಎಂಬ ಪ್ರಶ್ನೆ ನಿಮ್ಮದಾದರೆ, ನೇರವಾಗಿ ವಿಷಯಕ್ಕೆ ಬಂದುಬಿಡೋಣ. ಲೆಬನಾನ್‌ನ ಕರಾವಳಿ ಪಟ್ಟಣ ಸಿಡಾನ್‌ನ ಹತ್ತು ವರ್ಷದ ಪೋರ ಗೈಡ್ ಆಗಿ ಪ್ರವಾಸಿಗರನ್ನು ಊರಿನ ಪ್ರತಿಯೊಂದು ಚಾರಿತ್ರಿಕ ತಾಣವನ್ನು ತೋರಿಸುತ್ತಾ, ಅವುಗಳ ಕುರಿತು ಐತಿಹಾಸಿಕ ಮಾಹಿತಿಯನ್ನು ನೀಡುತ್ತಾ ತಾನೇ ದೊಡ್ಡ ಸೆಲೆಬ್ರಿಟಿಯಾಗಿ ಬಿಟ್ಟಿದ್ದಾನೆ.

ಅಂದಹಾಗೆ, ಆ ಪೋರನ ಹೆಸರು ಅಬ್ದುಲ್ ರೆಹಮಾನ್ ಅಲ್ ಫರ್ಹಾ ಎಂದು. ಜಗತ್ತಿನ ಅತ್ಯಂತ ಚಿಕ್ಕವಯಸ್ಸಿನ ಟೂರಿಸ್ಟ್ ಗೈಡ್ ಎಂಬ ಖ್ಯಾತಿಗೆ ಒಳಗಾಗಿರುವ ಅಬ್ದುಲ್‌ನ ಪುಟ್ಟ ತಲೆಯಲ್ಲಿ ಗಂಟು ಕಟ್ಟಿರುವ ನೆನಪಿನ ಬುತ್ತಿಯಲ್ಲಿ ಐತಿಹಾಸಿಕ ಕಥೆಗಳ ಕಣಜವೇ ಇದೆ. ಅಥೆಂಟಿಕ್ ಮಾಹಿತಿಗಳು, ನಿಖರ ಅಂಕಿಅಂಶಗಳು ಹಾಗೂ ಗತಕಾಲದ ವಿದ್ಯಮಾನಗಳನ್ನು ಒಳಗೊಂಡ ಮಾಹಿತಿ ಈ ಪುಟಾಣಿಯ ಬಾಯಿಯಿಂದ ಸುರುಳಿಯಾಗಿ ಬಿಚ್ಚಿಕೊಳ್ಳುತ್ತಾ ಸಾಗಿದಂತೆ ಚಾರಿತ್ರಿಕ ಘಟನಾವಳಿಗಳ ಚಿತ್ರಣಗಳು ಕಣ್ಮುಂದೆ ಮೆರವಣಿಗೆ ಹೊರಡುತ್ತವೆ.

ಟೂರಿಸ್ಟ್ ಗೈಡ್‌ಗಳು ಕೊಡುತ್ತಿದ್ದ ವಿವರಣೆಯನ್ನು ತುಂಬಾ ಆಸಕ್ತಿಯಿಂದ ಗಮನಿಸುತ್ತಿದ್ದ ಅಬ್ದುಲ್, ತಾನೂ ಹಾಗೆ ಇತಿಹಾಸದ ಕಥೆ ಹೇಳಬಹುದೇ ಎಂದು ತನಗೆ ತಾನೇ ಪ್ರಶ್ನೆ ಹಾಕಿಕೊಂಡನಂತೆ. ಎರಡು ವರ್ಷಗಳ ಹಿಂದೆ, ಬೀದಿಯಲ್ಲಿ ಆಡುತ್ತಿದ್ದ ಮಕ್ಕಳ ಗುಂಪು ಕಟ್ಟಿಕೊಂಡು ಐತಿಹಾಸಿಕ ತಾಣಗಳನ್ನು ಪರಿಚಯ ಮಾಡಿಸುವ ಪರಿಪಾಟವನ್ನು ಆತ ಆರಂಭಿಸಿಯೇ ಬಿಟ್ಟ. ಅಬ್ದುಲ್‌ನ ಆತ್ಮವಿಶ್ವಾಸದ ಮಾತುಗಳು, ಚರಿತ್ರೆಯನ್ನು ಕಥೆಯಾಗಿ ಕಟ್ಟಿಕೊಡುವ ರೀತಿಗೆ ಸ್ಥಳೀಯ ಚರಿತ್ರೆಕಾರರು ನಿಬ್ಬೆರಗಾದರು. ಒಂದುದಿನ ಪ್ರವಾಸಿಗರಿಗೆ ತಾಣಗಳನ್ನು ಪರಿಚಯಿಸಲು ಈ ಹುಡುಗನನ್ನು ಬಿಟ್ಟುಬಿಟ್ಟರು. ಅಂದಿನಿಂದ ಅಬ್ದುಲ್ ಹಿಂದಿರುಗಿ ನೋಡಿದ್ದಿಲ್ಲ. ಬದಲಾಗಿ, ಇಲ್ಲಿಗೆ ಬರುವ ಬಹುತೇಕ ಪ್ರವಾಸಿಗರು ಆ ಹುಡುಗನೇ ಗೈಡ್ ಆಗಿ ಬೇಕು ಎಂದು ಬೇಡಿಕೆ ಇಡತೊಡಗಿದರು.

ಆಟ–ಪಾಠದಲ್ಲಿ ಕಾಲ ಕಳೆಯಬೇಕಾದ ಪುಟ್ಟ ಪೋರನೇ, ಗೈಡ್‌ಗಳ ದೊಡ್ಡ ಶೂಗಳಲ್ಲಿ ನಿನ್ನ ಕಾಲು ತೂರಿಸಿದ್ದೇಕೆ ಎಂದು ಯಾರಾದರೂ ಪ್ರಶ್ನಿಸಿದರೆ, ಆತನಲ್ಲಿ ಉತ್ತರ ಸಿದ್ಧವೇ ಇದೆ. ‘ನಮ್ಮೂರಿನ ಐತಿಹಾಸಿಕ ತಾಣಗಳ ಮೇಲೆ ನನಗೆ ತುಂಬಾ ಅಕ್ಕರೆ. ಅವುಗಳನ್ನು ಹೆಚ್ಚಿನ ಜನರಿಗೆ ಪರಿಚಯಿಸುವಾಸೆ. ಹಾಗೆಯೇ ಪ್ರವಾಸಿಗರು ನೀಡುವ ಸಂಭಾವನೆಯನ್ನು ಪಡೆಯುವ ಆತುರ ಬೇರೆ. ಏಕೆಂದರೆ, ಅಪ್ಪ ಹಾಸಿಗೆ ಹಿಡಿದಿದ್ದು, ಕುಟುಂಬದ ವರಮಾನದ ಬಂಡಿ ಉರುಳುವುದೇ ಕಷ್ಟವಾಗಿದೆ. ನನ್ನ ಕುಟುಂಬಕ್ಕೆ ಇದೊಂದು ಪುಟ್ಟ ನೆರವು’ ಎಂದೆನ್ನುವ ಈ ಪೋರ, ಎದುರಿಗಿದ್ದವರ ಕಣ್ಣಾಲಿಗಳು ತುಂಬಿ ಕೊಳ್ಳುವಂತೆ ಮಾಡುತ್ತಾನೆ.

ಸಿಡಾನ್ ಪಟ್ಟಣದಲ್ಲಿ ಒಬ್ಬ ಬಡಗಿ ಇದ್ದಾರೆ. ಹೆಸರು ಮುಸ್ತಫಾ ಅಲ್ ಶರ್ಕಾವಾಯ್ ಎಂದು. ಅಬ್ದುಲ್‌ನ ಪರಿಶ್ರಮವನ್ನು, ಆತನ ಜಾಣತನವನ್ನು ತುಂಬಾ ಪ್ರಶಂಸಿಸುತ್ತಾರೆ. ಈ ಹುಡುಗ ನಮ್ಮೂರಿನ ಹೆಮ್ಮೆ. ನಮ್ಮೂರಿನ ಆಸ್ತಿ ಕೂಡ. ಅವನಿಗೆ ಇರುವಷ್ಟು ಇತಿಹಾಸದ ಮಾಹಿತಿ ದೊಡ್ಡವರಿಗೂ ಇಲ್ಲ ಎಂದು ಅವನ ಹಿರಿಮೆಯನ್ನು ಹಾಡಿ ಹೊಗಳುತ್ತಾರೆ. ಪುರಾತನ ಹವೆ ಸ್ನಾನದ ಹಮ್ಮಾಮ್ ಇರಬಹುದು, ಖಾನ್ ಅಲ್ ಫ್ರಾಂಜ್ (ದಾರಿಹೋಕರ ತಂಗುದಾಣ) ಇರಬಹುದು, ಪ್ರವಾಸಿಗರನ್ನು ಅವರು ನೋಡಲೇಬೇಕಾದ ಎಲ್ಲ ಸ್ಥಳಗಳಿಗೆ ಆತ ಕರೆದುಕೊಂಡು ಹೋಗುತ್ತಾನೆ. ಇತಿಹಾಸದ ಮಾಹಿತಿಯನ್ನು ಇಂಚಿಂಚೂ ಬಿಡದಂತೆ ಕೊಡುತ್ತಾನೆ. ಯುರೋಪಿಯನ್ನರಿಗೆ ಈ ಹುಡುಗನೆಂದರೆ ಪಂಚಪ್ರಾಣ ಎಂದೂ ಅವರು ಹೇಳುತ್ತಾರೆ.

ಅದೋ ನೋಡಿ ಛತ್ತಿನಲ್ಲಿರುವ ಕಲಾಕೃತಿ, ಈ ಅಲ್ಮೇರಾದಲ್ಲಿ ಏನಿದೆ ಗೊತ್ತೇ, ಈ ಕೆತ್ತನೆಯನ್ನು ಮಾಡಿದವರು ಯಾರು ಎಂಬ ಮಾಹಿತಿ ಇದೆಯೇ, ಈ ಚಿತ್ರದಲ್ಲಿ ಏನು ವಿಶೇಷವಿದೆ ಗುರುತಿಸುವಿರಾ, ನಾಲ್ಕುನೂರು ವರ್ಷಗಳ ಹಿಂದೆ ಏನಾಯಿತೆಂದರೆ... ಹೀಗೆ ಅಬ್ದುಲ್ ಕಣ್ಣುಗಳನ್ನು ಅಗಲಿಸಿ ಕಥೆ ಹೇಳುತ್ತಿದ್ದರೆ ಕಾಲ ಶತಮಾನಗಳಷ್ಟು ಸರ್ರನೆ ಹಿಂದಕ್ಕೆ ಸರಿಯುತ್ತದೆ. ಮುಂದೆ ಟೂರಿಸ್ಟ್ ಗೈಡ್ ಕೆಲಸವನ್ನೇ ವೃತ್ತಿಯಾಗಿ ಸ್ವೀಕರಿಸುವ ಇರಾದೆ ಈತನದು.

ಈ ಜಾಣ ಪೋರ ಶಾಲೆಗೆ ಹೋಗುವುದನ್ನೇನು ನಿಲ್ಲಿಸಿಲ್ಲ. ಬಿಡುವಿನ ವೇಳೆಯಲ್ಲಿ ಈ ಹವ್ಯಾಸ ಆತನ ಚಾರಿತ್ರಿಕ ಜ್ಞಾನವನ್ನು ಬೆಳೆಸಿದೆ. ಜೊತೆಗೆ ಮನೆಗೊಂದಿಷ್ಟು ಆದಾಯವನ್ನೂ ತರುವಂತೆ ಮಾಡಿದೆ. ಪ್ರವಾಸಿಗರು ಇಲ್ಲದಿದ್ದಾಗ ಮಾತ್ರ ಸ್ನೇಹಿತರೊಂದಿಗೆ ಆತ ಆಟ ಆಡುತ್ತಾನೆ. ಮನೆಯವರೊಂದಿಗೂ ಕಾಲ ಕಳೆಯುತ್ತಾನೆ. ಅಬ್ದುಲ್, ಈಗ ಊರಿನ ಮುದ್ದಿನ ಮಗು ಮಾತ್ರವಲ್ಲ; ಜಗತ್ತಿನ ವಿವಿಧ ಭಾಗಗಳಿಂದ ಬರುವ ಪ್ರವಾಸಿಗರ ನೆಚ್ಚಿನ ಪುಟಾಣಿಯೂ ಆಗಿದ್ದಾನೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65